## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು

## Karnataka State Road Transport Corporation
## Central Office : Bengaluru
### Recruitment Section ( ನೇಮಕ ಶಾಖೆ )

ಸಂ.ಕರಾಸಾ:ಕೇಕ:ನೇಮಕ:ಸಿ-2: 860 :2021-22 ದಿನಾಂಕ: 09.02.2022

### ಜಾಹೀರಾತು ಸಂಖ್ಯೆ : 1/2022
### (ಪರಿಶಿಷ್ಟ ಜಾತಿ ಹಿಂಬಾಕಿ ಹುದ್ದೆಯ ವಿಶೇಷ ನೇಮಕಾತಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ "ಕಛೇರಿ ಸಹಾಯಕ(ತೋಟಗಾರಿಕೆ)" ದರ್ಜೆ-IV ಪರಿಶಿಷ್ಟ ಜಾತಿ ಹಿಂಬಾಕಿ ಹುದ್ದೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿ-1982 ಮತ್ತು ಸರ್ಕಾರದ ಅಧಿಸೂಚನೆ ಕ್ರಮಾಂಕ ಡಿಪಿಎಆರ್/13/ಎಸ್ ಬಿಸಿ/2001 ದಿನಾಂಕ:21-11-2001 ರ ಅನುಸಾರ ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗೆ ಅರ್ಜಿ ಸಲ್ಲಿಸಬಯಸುವವರು ಕ.ರಾ.ರ.ಸಾ.ನಿಗಮದ ಯಾವುದೇ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಇಚ್ಛಿಸಿದಲ್ಲಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

**ಹುದ್ದೆಯ ವರ್ಗೀಕರಣ** :

| ಕ್ರ.ಸಂ. | ಹುದ್ದೆಯ ಹೆಸರು | ವರ್ಗ | ಹುದ್ದೆ ಸಂಖ್ಯೆ |
|---|---|---|---|
| 1 | ಕಚೇರಿ ಸಹಾಯಕ (ತೋಟಗಾರಿಕೆ) | ಪ.ಜಾ (ಸಾಮಾನ್ಯ) | 1 |

**I. ಶೈಕ್ಷಣಿಕ ವಿದ್ಯಾರ್ಹತೆ :**

| ಹುದ್ದೆ | ವಿದ್ಯಾರ್ಹತೆ |
|---|---|
| ಕಛೇರಿ ಸಹಾಯಕ (ತೋಟಗಾರಿಕೆ) | ಅ) ಏಳನೇ ತರಗತಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರಬೇಕು.<br>ಆ) ನಿಯಮಾವಳಿಯಡಿ ನಿಗಧಿಪಡಿಸಿರುವ ದೇಹದಾರ್ಢ್ಯತೆ ಹೊಂದಿರಬೇಕು.<br>a) A pass in VII Standard or equivalent qualification<br>b) Must have physical Standards as prescribed under Regulations. |

**II. ವಯೋಮಿತಿ:**

ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ **ದಿನಾಂಕ: 04-03-2022 ಕ್ಕೆ,**

ಅ. ಕನಿಷ್ಠ 18 ವರ್ಷಗಳು ಪೂರ್ಣಗೊಂಡಿರಬೇಕು.

ಆ. ಗರಿಷ್ಠ 40 ವರ್ಷಗಳು ಮೀರಿರಬಾರದು.

ಇ. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ.ಡಿಪಿಎಆರ್/13/ಎಸ್‌ಬಿಸಿ/2001 ದಿನಾಂಕ: 21-11-2001 ರನ್ವಯ ವಿಶೇಷ ಹಿಂಬಾಕಿ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಪೈಕಿ ಮೊದಲು 29 ರಿಂದ 40 ವರ್ಷದ ವಯೋಮಿತಿಯ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು. ಸದರಿ ವಯೋಮಿತಿಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ 18 ವರ್ಷ ಪೂರ್ಣಗೊಂಡ ಹಾಗೂ 29 ವರ್ಷ ಪೂರ್ಣಗೊಳ್ಳದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಶೀಲಿಸಲಾಗುವುದು.

**III. ದೇಹದಾರ್ಢ್ಯತೆ :**

ಕಛೇರಿ ಸಹಾಯಕ(ತೋಟಗಾರಿಕೆ) ಹುದ್ದೆಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಸದರಿ ಹುದ್ದೆ ನಿರ್ವಹಿಸಲು ಸಶಕ್ತರಿರುವ ಕುರಿತು ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರವು ಪಡೆಯುವುದು ಕಡ್ಡಾಯವಾಗಿರುತ್ತದೆ.

**IV ಮೀಸಲಾತಿಗಳು**

**1. ಜಾತಿ ಪ್ರಮಾಣ ಪತ್ರ:** ಸರ್ಕಾರದಿಂದ ನಿಗಧಿಪಡಿಸಿರುವಂತೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪರಿಶಿಷ್ಟ ಜಾತಿಗೆ ಸೇರಿದ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಅಂತಿಮ **ದಿನಾಂಕ: 04-03-2022** ಗಿಂತ ಮೊದಲು ಪಡೆದಿರಬೇಕು.

**V** **<u>ಅರ್ಜಿಯನ್ನು ಪಡೆಯುವ ವಿಧಾನ :</u>**

ಪತ್ರಿಕಾ ಪ್ರಕಟಣೆಯಲ್ಲಿ ನೀಡಿರುವ ಅರ್ಜಿ ನಮೂನೆಯನ್ವಯ ಅಥವಾ ನಿಗಮದ ಅಧಿಕೃತ www.ksrtcjobs.karnataka.gov.in ರ ವೆಬ್-ಸೈಟ್‌ನಲ್ಲಿ ಡೌನ್ ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ಕೊನೆಯ ದಿನಾಂಕದೊಳಗಾಗಿ ಪೂರಕ ದಾಖಲೆಯೊಂದಿಗೆ ಸಲ್ಲಿಸಬಹುದಾಗಿದೆ.

**VI** **<u>ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ</u>**

ಅ) **ದಿನಾಂಕ:** 10-02-2022 ರಿಂದ **ದಿನಾಂಕ:** 04-03-2022 ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಆ) ಭರ್ತಿ ಮಾಡಿದ ಅರ್ಜಿಯನ್ನು ನಿಗಧಿಪಡಿಸಿರುವ ಕೊನೆಯ **ದಿನಾಂಕ : 04-03-2022** ರಂದು ಖುದ್ದಾಗಿ ಅಥವಾ ಅಂಚೆ ಮೂಲಕ ಸಂಜೆ 5.30 ಗಂಟೆಯೊಳಗಾಗಿ **ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು** (ನೇಮಕ), ಕ.ರಾ.ರ.ಸಾ ನಿಗಮ, ಕೇಂದ್ರ ಕಚೇರಿ, ಬೆಂಗಳೂರು-27 ಇಲ್ಲಿಗೆ ತಲುಪುವಂತೆ ಸಲ್ಲಿಸುವುದು. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ ಹಾಗೂ ಸಮಯದ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಇ) ಅರ್ಜಿಯೊಂದಿಗೆ ನಿಗಧಿಪಡಿಸಿರುವ ಶುಲ್ಕವಾದ **ರೂ. 200/-** ಡಿ.ಡಿಯನ್ನು CAO-FA, KSRTC, Central Office, Bangalore ರವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು.

ಈ) ಅಭ್ಯರ್ಥಿಗಳು ಕೇವಲ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸುವುದು. ಆದ್ದರಿಂದ ಅಭ್ಯರ್ಥಿಗಳು ಸೂಚನೆಗಳನ್ನು ಓದಿ, ಅರ್ಥ ಮಾಡಿಕೊಂಡ ನಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು.

**VII** **<u>ಆಯ್ಕೆ ವಿಧಾನ</u>**

ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಯ ನಂತರ ಹುದ್ದೆಗೆ ನಿಗಧಿಪಡಿಸಲಾದ 7ನೇ ತರಗತಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಮೆರಿಟ್ ಅನುಸಾರ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ.ಡಿಪಿಎಆರ್/13/ಎಸ್‌ಬಿಸಿ/2001 ದಿನಾಂಕ:21-11-2001 ರನ್ವಯ ವಿಶೇಷ ಹಿಂಬಾಕಿ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಪೈಕಿ ಮೊದಲು 29 ರಿಂದ 40 ವರ್ಷದ ವಯೋಮಿತಿಯ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು. ಸದರಿ ವಯೋಮಿತಿಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ 18 ವರ್ಷ ಪೂರ್ಣಗೊಂಡು 29 ವರ್ಷ ಪೂರ್ಣಗೊಳ್ಳದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

**VIII** **<u>ತರಬೇತಿ ಅವದಿ, ಭತ್ಯೆ ಹಾಗೂ ವೇತನ ಶ್ರೇಣಿ</u>**

ಅ) ಹುದ್ದೆಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಒಂದು ವರ್ಷ ಕಾಲ ವೃತ್ತಿ ತರಬೇತಿ ಮೇಲೆ ನಿಯೋಜಿಸಲಾಗುವುದು. ತರಬೇತಿ ಅವಧಿಯಲ್ಲಿ ಮಾಸಿಕ ರೂ. 8,600/- ತರಬೇತಿ ಭತ್ಯೆಯನ್ನು ನೀಡಲಾಗುವುದು.

ಆ) ಮೇಲ್ಕಾಣಿಸಿದಂತೆ ಒಂದು ವರ್ಷದ ವೃತ್ತಿ ತರಬೇತಿಯನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ, ಅವರನ್ನು ಖಾಯಂ ಪೂರ್ವ ಪರೀಕ್ಷಾರ್ಥ ಸೇವೆಯ ಮೇಲೆ ಹುದ್ದೆಯ ಕಾಲಿಕ ವೇತನ ಶ್ರೇಣಿ ರೂ.11320-140-12020-170-12870-250-14370-320-15010 ನಿಯೋಜಿಸಲಾಗುವುದು. ಜೊತೆಗೆ ಸಂಸ್ಥೆಯಲ್ಲಿ ಲಭ್ಯವಿರುವ ಇನ್ನಿತರೆ ಸೌಲಭ್ಯಗಳಿಗೆ ಅರ್ಹರಿರುತ್ತಾರೆ.

**IX** **<u>ಭರ್ತಿ ಮಾಡಿದ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳ ವಿವರ</u>**

1. ಅರ್ಜಿ ಶುಲ್ಕವನ್ನು ಬ್ಯಾಂಕಿನಲ್ಲಿ ಪಾವತಿಸಿರುವ ಮೂಲ ಡಿಮ್ಯಾಂಡ್ ಡ್ರಾಫ್ಟ್.
2. <u>7ನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯಲ್ಲಿ ಶಾಲಾ ಮುಖ್ಯೋಪಾಧ್ಯಾಯರ ಸಹಿಯ ಜೊತೆಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ಸಹಿಯುಳ್ಳ ಅಂಕಪಟ್ಟಿಯ ಪ್ರತಿ. (ನಕಲಿ/ಸುಳ್ಳು ಅಂಕಪಟ್ಟಿ ಸಲ್ಲಿಸಿರುವುದು ಕಂಡುಬಂದಲ್ಲಿ ನೇಮಕಾತಿಗೆ ಅನರ್ಹಗೊಳಿಸಲಾಗುವುದು ಹಾಗೂ ಕಾನೂನು ಕ್ರಮ ಜರುಗಿಸಲಾಗುವುದು).</u>
3. ಜಾತಿ ಪ್ರಮಾಣ ಪತ್ರದ ಪ್ರತಿ.
4. ಜನ್ಮ ದಿನಾಂಕದ ದಾಖಲೆಗಾಗಿ ಶಾಲಾ ವರ್ಗಾವಣಾ ಪ್ರಮಾಣ ಪತ್ರದ ಪ್ರತಿ.

**X ಸೂಚನೆಗಳು**

ನೈತಿಕ ದುರ್ನಡತೆಯಿಂದಾಗಿ/ ನೀತಿಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ಈ ಸಂಸ್ಥೆಯಲ್ಲಿ ಅಥವಾ ರಾಜ್ಯ / ಕೇಂದ್ರ / ಸ್ಥಳೀಯ ಸಂಸ್ಥೆ / ಕೈಗಾರಿಕಾ / ವಾಣಿಜ್ಯಕ್ಕೆ ಸಂಬಂಧಪಟ್ಟ ಅಥವಾ ರಾಜ್ಯ ಸಾರಿಗೆ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ / ನೀತಿಬಾಹಿರ ಚಟುವಟಿಕೆಗಳಲ್ಲಿ ಒಳಗಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ / ನೀತಿಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ / ವಜಾ ಮಾಡಲ್ಪಟ್ಟಿದ್ದು ಕಂಡು ಬಂದಲ್ಲಿ ನೇಮಕಾತಿಗೆ ಅನರ್ಹರಾಗುತ್ತಾರೆ.

- ಅರ್ಜಿಯಲ್ಲಿ ಸುಳ್ಳು ಮಾಹಿತಿ ನೀಡಿ ಅಥವಾ ನಕಲಿ ಪ್ರಮಾಣಪತ್ರ/ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು. ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೆ ಯಾವುದೇ ಸಮಯದಲ್ಲಾದರೂ ನೌಕರಿಯಿಂದ ವಜಾ ಮಾಡಲಾಗುವುದು ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.
- ಆಯ್ಕೆಗೊಂಡು ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪದಾನ ಪಾವತಿ ಕಾಯ್ದೆ 1972 ರನ್ವಯ ಉಪಧಾನ ಪಡೆಯಲು ಅರ್ಹರಿರುತ್ತಾರೆ.
- ಏಳನೇ ತರಗತಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡದೆ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ನಿಗಮದ ವತಿಯಿಂದ ನಡೆಸಲಾಗುವ ಕನ್ನಡ ಭಾಷಾ ಜ್ಞಾನ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.
- ಅಭ್ಯರ್ಥಿಗಳ ಅರ್ಹತೆಯ ಹಾಗೂ ಆಯ್ಕೆಯ ವಿಷಯದಲ್ಲಿ ಕ.ರಾ.ರ.ಸಾ.ನಿಗಮದ ನಿರ್ಧಾರವೇ ಅಂತಿಮವಾಗಿರುತ್ತದೆ.
- ಆಯ್ಕೆಗೊಂಡ ಅಭ್ಯರ್ಥಿಗಳನ್ನು ಕ.ರಾ.ರ.ಸಾ ನಿಗಮದ ವ್ಯಾಪ್ತಿಯ ವಿಭಾಗಗಳಿಗೆ ನಿಯೋಜಿಸಲಾಗುವುದು.
- ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹತೆ ಪಡೆದ ಅಭ್ಯರ್ಥಿಗಳು ಪರಿಶೀಲನಾ ಸಂದರ್ಭದಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಪ್ರತಿಯೊಂದು ಮಾಹಿತಿಗೆ ಪೂರಕವಾದ ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದಂತೆ ಚಾಲ್ತಿಯಲ್ಲಿರುವ ಎಲ್ಲಾ ದಾಖಲಾತಿ : ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸಬೇಕು. ತಪ್ಪಿದಲ್ಲಿ ಸದರಿ ಅರ್ಹತೆ/ಸೌಲಭ್ಯಗಳನ್ನು ಕಳೆದುಕೊಳ್ಳುತ್ತಾರೆ. **ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ.**
- ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ www.ksrtcjobs.karnataka.gov.in ನಲ್ಲಿ ಆಗಿಂದಾಗ್ಗೆ ನೀಡುವ ಸೂಚನೆಗಳನ್ನು ಗಮನಿಸತಕ್ಕದ್ದು.

Sd/-
**ನಿರ್ದೇಶಕರು (ಸಿ & ಜಾ)**

<u>ಪ್ರತಿಯನ್ನು ಃ ಆದರಪೂರ್ವಕವಾಗಿ ಃ</u>

- ಉಪ ನಿರ್ದೇಶಕರು (ಕೇಂದ್ರಸ್ಥಾನ), ಸಮಾಜ ಕಲ್ಯಾಣ ಇಲಾಖೆ, ಡಾ/ಅಂಬೇಡ್ಕರ್ ಭವನ ವಸಂತನಗರ, ಬೆಂಗಳೂರು ರವರ ಮಾಹಿತಿಗಾಗಿ.
- ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ (ಎನ್‌ಫೋರ್ಸ್‌ಮೆಂಟ್ ಸೆಲ್) 4ನೇ ಮಹಡಿ, ಬಹುಮಹಡಿ ಕಟ್ಟಡ ಬೆಂಗಳೂರು-1 ರವರ ಮಾಹಿತಿಗಾಗಿ.
- ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ವಿನಿಮಯ ಕೇಂದ್ರ, ಸುಬ್ಬಯ್ಯ ರಸ್ತೆ ಬೆಂಗಳೂರು
- ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ತರಬೇತಿ 9/1, ಶ್ರೀ ಪ್ರಕಾಶ ಕಾಂಪ್ಲೆಕ್ಸ್ ಪಿ. ಕಾಳಿಂಗ್‌ರಾವ್ ರಸ್ತೆ ಬೆಂಗಳೂರು.
- ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಎಂ.ಎಸ್.ಬಿಲ್ಡಿಂಗ್, ಬೆಂಗಳೂರು ರವರ ಮಾಹಿತಿಗಾಗಿ.
- ಎಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ರವರ ಮಾಹಿತಿ ಹಾಗೂ ಜಾಹೀರಾತು ಪ್ರತಿಯನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಲು ಕೋರಲಾಗಿದೆ.
- ಎಲ್ಲಾ ಜಿಲ್ಲಾ ಉದ್ಯೋಗಾಧಿಕಾರಿಗಳು ರವರ ಮಾಹಿತಿ ಹಾಗೂ ಜಾಹೀರಾತು ಪ್ರತಿಯನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಲು ಹಾಗೂ ತಮ್ಮ ಉದ್ಯೋಗ ವಿನಿಮಯ ಕಛೇರಿಯಲ್ಲಿ ಹೆಸರನ್ನು ನೊಂದಾಯಿಸಿದ ಅರ್ಹ ಅಭ್ಯರ್ಥಿಗಳಿಗೆ ಈ ಹುದ್ದೆಗೆ ಅರ್ಜಿ ಸಲ್ಲಿಸಲು ಸೂಚಿಸುವಂತೆ ಕೋರಲಾಗಿದೆ.

ಪ್ರತಿಯನ್ನು:

1. ವ್ಯವಸ್ಥಾಪಕ ನಿರ್ದೇಶಕರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕರಾರಸಾ ನಿಗಮ ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
2. ನಿರ್ದೇಶಕರು(ಸಿಬ್ಬಂದಿ:ಜಾಗೃತ), ಹಿರಿಯ ಆಪ್ತ ಕಾರ್ಯದರ್ಶಿಗಳು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
3. ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
4. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಕಕರಸಾ ಸಂಸ್ಥೆ ರವರ ಮಾಹಿತಿಗಾಗಿ.
5. ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾ ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರ ರವರ ಮಾಹಿತಿಗಾಗಿ.

**ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ನೇಮಕ)**

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು

( ನೇಮಕ ಶಾಖೆ )

ಕಛೇರಿ ಸಹಾಯಕ (ತೋಟಗಾರಿಕೆ- ದರ್ಜೆ-IV) ಪರಿಶಿಷ್ಟ ಜಾತಿ ಹಿಂಬಾಕಿ ಹುದ್ದೆಯ ವಿಶೇಷ ನೇಮಕಾತಿಗಾಗಿ ಜಾಹೀರಾತು ಸಂ.1/2022 ರನ್ವಯ ಹೊರಡಿಸಿರುವ ಅಧಿಸೂಚನೆ ಸಂಖ್ಯೆ : 860 ದಿನಾಂಕ: 09-02-2022

ಅಭ್ಯರ್ಥಿಯ ಇತ್ತೀಚಿನ ಭಾವಚಿತ್ರ

ಹೆಸರು : ------------

ತಂದೆಯ ಹೆಸರು : ------------

ಜನ್ಮ ದಿನಾಂಕ : ------------

ಜಾತಿ : -------------

7ನೇ ತರಗತಿಯಲ್ಲಿ ಪಡೆದ ಅಂಕಗಳು : ಗರಿಷ್ಟ ಅಂಕ: ಪಡೆದ ಅಂಕ:

7ನೇ ತರಗತಿಯಲ್ಲಿ ಕನ್ನಡ ವಿಷಯದ ಅಭ್ಯಾಸ /ಪ್ರಥಮ/ದ್ವಿತೀಯ/ತೃತೀಯ/ಇಲ್ಲ

ಡಿ.ಡಿ.ಸಂಖ್ಯೆ: ದಿನಾಂಕ :

ವಿಳಾಸ:

### ಅಭ್ಯರ್ಥಿ ಘೋಷಣೆ

ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ಸತ್ಯವಾಗಿರುತ್ತದೆ. ಸುಳ್ಳು ಎಂದು ಯಾವುದೇ ಸಮಯದಲ್ಲಿ ಕಂಡುಬಂದಲ್ಲಿ ನನ್ನನ್ನು ಯಾವುದೇ ಸಮಯದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಕರ್ತವ್ಯದಿಂದ ತೆಗೆದುಹಾಕಬಹುದಾಗಿದೆ ಹಾಗೂ ನೇಮಕಾತಿಯನ್ನು ರದ್ಧುಪಡಿಸಬಹುದಾಗಿದೆ. ನಾನು ಯಾವುದೇ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಭಾಗಿಯಾಗಿಲ್ಲ/ಶಿಕ್ಷೆಗೆ ಒಳಪಟ್ಟಿಲ್ಲವೆಂದು ಹಾಗೂ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಯಾವುದೇ ಸಂಸ್ಥೆಯ ಸೇವೆಯಿಂದ ವಜಾ ಆಗಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ಅಭ್ಯರ್ಥಿಯ ಸಹಿ/-